## 13

# “ದೇವಜನರ ಸಭೆಗಳು”

*“ಯಾಕಂದರೆ ದೇವಜನರ ಎಲ್ಲಾ ಸಭೆಗಳಲ್ಲಿ ಇರುವಂತೆ, ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ” (1 ಕೊರಿಂಥ 14:34).*

ಕೆಲವು ಸಮಯಗಳಲ್ಲಿ ಒಂದು ವಸ್ತುವಿಗೆ ಇಲ್ಲವೇ ಕೃತಿಗೆ *ತಪ್ಪಾದ ಹೆಸರು* ಇಡುತ್ತೇವೆ, ಮತ್ತು ಕೆಲವೊಂದು ಕಾರಣದಿಂದ, ತಪ್ಪು ಎಂದೂ ಸರಿಪಡಿಸಲ್ಪಡುವುದಿಲ್ಲ. ಸತತವಾದ ಉಪಯೋಗದಿಂದ, ಸುಳ್ಳು, ಭಾಷೆಯ ರೂಢಿಯಾಗುತ್ತದೆ, ಮತ್ತು ವಾಸ್ತವಿಕತೆಗಾಗಿ ಇಲ್ಲವೇ ವಿಚಾರಕ್ಕಾಗಿ ಸರಿಯಾಗಿರದ ವ್ಯಕ್ತಪಡಿಸುವಿಕೆಯ ಉಪಯೋಗಕ್ಕೆ ಕಟ್ಟು ಬೀಳುತ್ತದೆ.

ಉದಾಹರಣೆಯಾಗಿ, ಒಬ್ಬ ಮನುಷ್ಯನು ಒಂದು ಕಾರಿನ ಸಂಚಾರ ಅಪಘಾತದಲ್ಲಿ ಸಿಕ್ಕಿಕೊಂಡಿದ್ದನು. ಅವನಿಗೆ ತೊಂದರೆಯಾಗಿರಲಿಲ್ಲ, ಆದರೆ ಅವನ ಕಾರು ಅತೀಯಾಗಿ ನಷ್ಟಕ್ಕೆ ಒಳಗಾಗಿತ್ತು. ಅಲ್ಲಿಂದ ಚಲಿಸಿಕೊಂಡು ಹೋಗದಷ್ಟಾಗಿತ್ತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಹಾದುಹೋಗುತ್ತಿದ್ದವನು ಸಹಾಯಮಾಡುವ ಉದ್ದೇಶದಿಂದ ಅಪಘಾತಕ್ಕೆ ಬಲಿಯಾದವನನ್ನು, “ಒಬ್ಬ ಧ್ವಂಸ ಮಾಡುವವನನ್ನು ನಾನು ಕರೆಯಲೋ?” ಎಂದು ಕೇಳಿದನು. ಅದಕ್ಕೆ ಖಿನ್ನನಾದ ಮನುಷ್ಯನು, “ನನಗೆ ಒಬ್ಬ ಧ್ವಂಸ ಮಾಡುವವನ ಅಗತ್ಯತೆಯಿಲ್ಲ. ಕಾರು ಆಗಲೇ ನಾಶವಾಗಿದೆ. ಅದನ್ನು ಇಲ್ಲಿಂದ ಎಳೆದು ಕೊಂಡು ಹೋಗಲಿಕ್ಕೆ ಎಳೆದುಕೊಂಡು ಹೋಗುವದರ (ಟೌ ಟ್ರಕ್) ಅಗತ್ಯತೆಯಿದೆ!” ಎಂದು ಹೇಳಿದನು, ಅವನು ಸರಿಯಾಗಿದ್ದನು, ಹೌದಲ್ಲವೇ? ಅವಶೇಷಗಳನ್ನು ಎಳೆದು ಕೊಂಡು ಹೋಗುವಂಥದ್ದಕ್ಕೆ “ರೆಕ್ಕರ” ಎಂದು ಕರೆಯುತ್ತೇವೆ; ಆದರೆ ಅದೇ ಟ್ರಕ್ಕು ದಾರಿಯಲ್ಲಿ ನಮ್ಮ ಕಡೆಗೆ ಬರುವುದನ್ನು ನಾವು ನೋಡುವಾಗ, ಹೆಸರು ತಪ್ಪಾಗಿ ಹೇಳಲ್ಪಟ್ಟಿದೆಯೆಂದು ನಿರೀಕ್ಷಿಸುತ್ತೇವೆ.

ಒಂದು ಭಾಷೆಯ ಬೆಳವಣಿಗೆಯಲ್ಲಿ, ಬಹಳ ಸಲ ಒಂದು ಒಳ್ಳೇ ಪದವು ಅದಕ್ಕೆ ನಿಜವಾಗಿ ಸಂಬಂಧಿಸಿದ ಅರ್ಥದೊಂದಿಗೆ ಕೂಡಿಸಲ್ಪಡುತ್ತದೆ. ಈ ಸಂಗತಿಯು ಒಂದು ಭಾಷೆಯನ್ನು ತಿಳಿಯುವುದು ಅದರಲ್ಲಿ ಹಾಗೂ ಅದು ತಾನೇ, ಸಂಪರ್ಕಿಸುವಿಕೆಗೆ ಭರವಸೆ ಕೊಡುವುದಿಲ್ಲ. ವಿಚಾರಗಳ ನಿಜವಾದ ಬದಲಾವಣೆಗೆ ಪ್ರಯತ್ನದ ಅಗತ್ಯತೆಯಿರುತ್ತದೆ. ಗಲಿಬಿಲಿಯಾಗುವ ಸಾಧ್ಯತೆಯ ಕಾರಣದಿಂದ, “ಭಾಷೆಯ ಆಕಸ್ಮಿಕಗಳು” ಇಲ್ಲವೇ “ಮಾತಿನ ಚತುರೋಕ್ತಿಗಳ” ಬಗ್ಗೆ ನಾವು ಎಚ್ಚರಿಕೆಯಿಂದ ಇರಬೇಕು. ವಸ್ತುಗಳಿಗೆ ತಪ್ಪು ಹೆಸರಿಡುವುದು ಮತ್ತು ಪದಗಳನ್ನು ತಪ್ಪಾಗಿ ಉಪಯೋಗಿಸುವುದು ಇಂಥ ಗಲಿಬಿಲಿಗಳಾಗಿರುತ್ತವೆ. ಮತ್ತು ಭಾಷೆಯ ಈ ಅತಿರೇಕಗಳು ಮಹತ್ವದ ವಿಷಯದ ಇಲ್ಲವೇ ಮುಖ್ಯ ಪ್ರಸ್ತಾಪದ ತಪ್ಪು ತಿಳುವಳಿಕೆಗೆ ನಡಿಸದಂತೆ ನಿಶ್ಚಿತತೆಯುಳ್ಳವರಾಗಿರತಕ್ಕದ್ದು.

ಮನಸ್ಸಿನಲ್ಲಿ ಗಲಿಬಿಲಿಯ ಪದಗಳ ಬಗ್ಗೆ ಈ ವಿಚಾರಗಳೊಂದಿಗೆ, "ದೇವಜನರು" ("ಪರಿಶುದ್ಧರು") ಎಂಬ ಪದದ ಮೇಲೆ ಕೇಂದ್ರೀಕರಿಸೋಣ. 1 ಕೊರಿಂಥ 14:33ರಲ್ಲಿ ಕ್ರಿಸ್ತನ ಸಭೆಗಳಿಗೆ ಪೌಲನು ಮಾಡಿದ ಸಾಮಾನ್ಯ ಉಲ್ಲೇಖದಲ್ಲಿ ಅದು ಬಹುವಚನ ರೂಪದಲ್ಲಿ ಕಂಡು ಬರುತ್ತದೆ: "ದೇವಜನರ (ಪರಿಶುದ್ಧರ) ಎಲ್ಲಾ ಸಭೆಗಳಲ್ಲಿಯಂತೆ, ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ." "ದೇವಜನರ ಸಭೆಗಳು" ಎಂಬ ಹೆಸರು, ಆಸಕ್ತಿಯುಳ್ಳದ್ದೂ ಮತ್ತು ಮಾಹಿತಿಕೊಡುವಂಥದ್ದೂ, ಪ್ರಕಾಶಗೊಳಿಸುವಂಥದ್ದೂ ಮತ್ತು ಪ್ರಭಾವ ಬೀರುವಂಥದ್ದೂ, ಸಭೆಯನ್ನು ರಚಿಸುವ ಜನರ ಗುರುತಿನೊಳಗೆ ಇನ್ನೊಂದು ನೋಟ ಕೊಡುವಂಥದ್ದೂ ಆಗಿರುತ್ತದೆ. ಈ ವಚನದ ಪ್ರಕಾರ, ಒಬ್ಬನು ಆ ತತ್ವದಲ್ಲಿ "ದೇವಭಕ್ತ" ಎಂಬ ಮಾತಿನ ಬೈಬಲಿನ ಅರ್ಥವನ್ನು ಅಳವಡಿಸಿಕೊಳ್ಳದಿದ್ದರೆ ಸಭೆಯ ತತ್ವದ ಸಂಪೂರ್ಣ ತಿಳುವಳಿಕೆಯನ್ನು ಹೊಂದಲಾರನು.

## ಪದವು ಗುರುತಿಸಲ್ಪಟ್ಟಿದ್ದು

"ಸಂತ" (ದೇವಜನ) ಎಂಬ ಪದವು ದೇವಭಕ್ತನೆಂಬ ಪ್ರಸಿದ್ಧಿಯುಳ್ಳ ವ್ಯಕ್ತಿಗೆ ಸಂಬಂಧಿಸಿ ತಪ್ಪಾಗಿ ಉಪಯೋಗಿಸಲ್ಪಟ್ಟಿದೆ. "ಆ ಮನುಷ್ಯನು ನಿಜವಾಗಿಯೂ ದೇವಭಕ್ತನಾಗಿದ್ದಾನೆ" ಎಂದು ಯಾರಾದರೊಬ್ಬನು ಹೇಳುತ್ತಾನೆ. ಅದು ಆ ವ್ಯಕ್ತಿಯು ದೇವಭಕ್ತನೆಂದು ಕರೆಯಲ್ಪಡುವ *ಹಕ್ಕನ್ನು* ಸಂಪಾದಿಸಿಕೊಂಡಿರುವನೆಂಬಂತೆ ತೋರಿ ಸುತ್ತದೆ.

ಈ ಮಾತು, ಶ್ರೇಷ್ಠವಾದ ನಂಬಿಕೆಯ ಸೇವೆಯಲ್ಲಿ ಮರಣ ಹೊಂದಿದವರಿಗಾಗಿ ಪ್ರತ್ಯೇಕವಾಗಿ ಉಪಯೋಗಿಸಲ್ಪಟ್ಟಿದೆ. ಈ ರೀತಿಯಲ್ಲಿ ಪದವನ್ನು ಉಪಯೋ ಗಿಸುವವರು ಆ ವ್ಯಕ್ತಿಯು ಮರಣ ಹೊಂದಿ, ಒಬ್ಬ ಸಂತನಂತೆ ಅಧಿಕೃತವಾಗಿ ಗುರುತಿಸಲ್ಪಡುವವರೆಗೆ ಈ ಮಾತನ್ನು ಅನ್ವಯಿಸುವುದಿಲ್ಲ. ಈ "ಸಂತ" ಎಂಬ ಪದದ ಎರಡು ನಿರೂಪಣೆಗಳು ಇಲ್ಲವೇ ಉಪಯೋಗಗಳು ಬೈಬಲಿನ, ಪದದ ಪ್ರೇರೇ ಪಿತ ಉಪಯೋಗಕ್ಕೆ ಹೊಂದಿಕೊಳ್ಳವುದಿಲ್ಲ.

ಪದವು ಹೊಸ ಒಡಂಬಡಿಕೆಯ ಬರಹಗಾರರಿಂದ "ಕ್ರಿಸ್ತನಲ್ಲಿರುವವರು" ಎಂಬ ಸರಳ ಅರ್ಥ ಕೊಡುವುದಕ್ಕೆ ಸತತವಾಗಿ ಉಪಯೋಗಿಸಲ್ಪಟ್ಟಿದೆ. ಈ ಉಪಯೋಗದ ಒಂದು ಉದಾಹರಣೆಯು ಫಿಲಿಪ್ಪಿಯವರಿಗೆ ಪೌಲನು ಬರೆದ ಪತ್ರಿಕೆಯಲ್ಲಿ ಕಂಡುಬರುತ್ತದೆ. "ಕ್ರಿಸ್ತ ಯೇಸುವಿನ ದಾಸರಾದ ಪೌಲ ತಿಮೊಥೆಯರು ಫಿಲಿಪ್ಪಿಯಲ್ಲಿ ಕ್ರಿಸ್ತ ಯೇಸುವಿನ ಮೂಲಕ ದೇವಜನರಾಗಿರುವವರೆಲ್ಲರಿಗೂ ಅವರಲ್ಲಿರುವ ಸಭಾಧ್ಯಕ್ಷರಿಗೂ ಸಭಾ ಸೇವಕರಿಗೂ ಬರೆಯುವುದು ..." (ಫಿಲಿಪ್ಪಿ 1:1). ಅವನು ಪತ್ರಿಕೆಯನ್ನು ಮುಕ್ತಾಯಗೊಳಿಸಿದಂತೆ, "ದೇವಜನರಲ್ಲಿ ಪ್ರತಿಯೊಬ್ಬನಿಗೆ ಜೊತೆ ಕ್ರೈಸ್ತನಿಗೆಂದು ನನ್ನ ವಂದನೆಯನ್ನು ಹೇಳಿರಿ ... ಇಲ್ಲಿರುವ ದೇವಜನರು ನಿಮ್ಮನ್ನು ವಂದಿಸುತ್ತಾರೆ ..." (ಫಿಲಿಪ್ಪಿ 4:21, 22). ಅವನು ತಾನು ಬರೆಯುತ್ತಿದ್ದ ಸ್ಥಳದಲ್ಲಿಯ ಪ್ರತಿಯೊಬ್ಬ ಕ್ರೈಸ್ತನನ್ನು ದೇವಜನರಂತೆ ಪೌಲನು ತಿಳಿದುಕೊಂಡನು, ಮತ್ತು ತಾನು ಯಾರಿಗೆ ಬರೆಯುತ್ತಿದ್ದನೋ ಆ ಪಟ್ಟಣದಲ್ಲಿಯ ಪ್ರತಿಯೊಬ್ಬ ಕ್ರೈಸ್ತನನ್ನು ದೇವಜನರಂತೆ ನೋಡಿದನು.

"ದೇವಜನ" ಎಂಬ ಪದದಲ್ಲಿ "ಪರಿಶುದ್ಧ ಉಪಯೋಗಕ್ಕಾಗಿ ಪ್ರತ್ಯೇಕಿಸಲ್ಪಟ್ಟ" ಇಲ್ಲವೇ "ದೇವರಿಗಾಗಿ ಪ್ರತ್ಯೇಕವಾಗಿರಿಸಲ್ಪಟ್ಟ" ವಿಚಾರವು ಒಳಗೊಂಡಿರುತ್ತದೆ. ಕ್ರೈಸ್ತನು ತನ್ನ ಮಾರ್ಪಡುವಿಕೆಯ ಸಮಯದಲ್ಲಿ, ಸ್ಥಾನದಲ್ಲಿ, ತತ್ವದಲ್ಲಿ ದೇವಜನವಾಗುತ್ತಾನೆ, ಸುವಾರ್ತೆಯ ಮುಖಾಂತರ ದೈವಿಕ ಸೇವೆಗಾಗಿ ಅವನು ಪ್ರತ್ಯೇಕಿಸಿಡಲ್ಪಡುತ್ತಾನೆ.

ಮಾರ್ಪಡುವಿಕೆಯ ಮೊದಲು, ಅವನು ಸೈತಾನನಿಗೆ ಮತ್ತು ಲೋಕಕ್ಕೆ ಒಳಪಟ್ಟಿದ್ದನು, ಹಾಗೂ ಸ್ವಾರ್ಥದ ಆಶೆಯಿಂದ ಪ್ರಭಾವಿತನಾಗಿದ್ದನು; ಆದರೆ ಮಾರ್ಪಡುವಿಕೆಯಲ್ಲಿ ಅವನು ದೇವರ ಸ್ವಾಸ್ಥ್ಯ ಅಥವಾ ವ್ಯಕ್ತಿಯಾಗುತ್ತಾನೆ (1 ಪೇತ್ರ 2:9).

ಈ ವಿಷಯದಲ್ಲಿ, ಎಲ್ಲಾ ಕ್ರೈಸ್ತರು ಹೊಸ ಒಡಂಬಡಿಕೆಯಲ್ಲಿ ದೇವಜನರೆಂದು ಚಿತ್ರಿಸಲ್ಪಟ್ಟಿದ್ದಾರೆ. ನಮ್ಮ ಕರ್ತನು ಅನನೀಯನಿಗೆ ಪೌಲನ ಬಳಿಗೆ ಹೋಗಿ, ಅವನಿಗೆ ರಕ್ಷಿಸಲ್ಪಡಬೇಕಾದರೆ ಏನು ಮಾಡಬೇಕೆಂಬುದನ್ನು ತಿಳಿಸು ಎಂದು ಹೇಳಿದನು. ಅನನೀಯನು ಆಜ್ಞೆಗೆ ಉತ್ತರ ಕೊಡುವಂತೆ ಅವನು ಯೆರೂಸಲೇಮಿನಲ್ಲಿಯ ಕ್ರೈಸ್ತರಿಗೆ ಉಲ್ಲೇಖಿಸಿ ಈ ನಾಮಾಂಕಿತವನ್ನು ಉಪಯೋಗಿಸಿದನು: "ಕರ್ತನೇ, ಆ ಮನುಷ್ಯನು ಯೆರೂಸಲೇಮಿನಲ್ಲಿ ನಿನ್ನನ್ನು ನಂಬಿದ ದೇವಜನರಿಗೆ ಎಷ್ಟೋ ಕೇಡನ್ನುಂಟು ಮಾಡಿದನೆಂದು ಅವನ ವಿಷಯವಾಗಿ ಅನೇಕರಿಂದ ಕೇಳಿದ್ದೇನೆ" (ಅಪೊಸ್ತಲರ ಕೃತ್ಯಗಳು 9:13; ಒತ್ತಿ ಹೇಳಿದ್ದು ನನ್ನದು). ಪೇತ್ರನ ಮಿಶನರಿ ಪ್ರಯಾಣಗಳ ವರದಿಯಲ್ಲಿ, ಲೂಕನು ಲುದ್ದದಲ್ಲಿಯ ಕ್ರಿಸ್ತನ ಹಿಂಬಾಲಕರನ್ನು "ದೇವರಜನರು" ಎಂದು ಕರೆದಿದ್ದಾನೆ: "ಪೇತ್ರನು ಎಲ್ಲಾ ಕಡೆಯೂ ಸಂಚಾರಮಾಡುತ್ತಿರುವಾಗ ಲುದ್ದದಲ್ಲಿ ವಾಸಿಯಾಗಿದ್ದ ದೇವಜನರ ಬಳಿಗೂ ಬಂದನು" (ಅಪೊಸ್ತಲರ ಕೃತ್ಯಗಳು 9:32). ರೋಮಾಪುರದರಿಗೆ ಬರೆದ ಪತ್ರಿಕೆಯಲ್ಲಿ, ಪೌಲನು ಕ್ರೈಸ್ತರ ಜೀವಿತಗಳಲ್ಲಿ ಪರಿಶುದ್ಧಾತ್ಮನ ಕೆಲಸದ ಬಗ್ಗೆ ಬರೆದನು, ಮತ್ತು ಈ ಸಂಬಂಧದಲ್ಲಿ, ದೇವರ ಎಲ್ಲಾ ಮಕ್ಕಳನ್ನು ದೇವಜನರಂತೆ ವಿವರಿಸಿದನು: "ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪರಿಶುದ್ಧಾತ್ಮನ ಮನೋಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು'' (ರೋಮಾಪುರ 8:27; ಒತ್ತಿ ಹೇಳಿದ್ದು ನನ್ನದು). ಪರಿಶುದ್ಧಾತ್ಮನು ಎಲ್ಲಾ ದೇವರ ಜನರಿಗಾಗಿ, ಅಂದರೆ, ದೇವರ ಎಲ್ಲಾ ಮಕ್ಕಳಿಗಾಗಿ ಬೇಡಿಕೊಳ್ಳುವನು ಎಂದು ಅವನು ಹೇಳಿದನು, "ದೇವರಜನರು" ಎಂಬ ಮಾತು ಹೊಸ ಒಡಂಬಡಿಕೆಯ ಪದವಾಗಿದ್ದು "ಕ್ರೈಸ್ತ" ಇಲ್ಲವೇ "ಕ್ರಿಸ್ತನಲ್ಲಿರುವವರ" ಯಾವುದೇ ಇತರ ವಿವರಣೆಗೆ ಸಮಾನವಾದದ್ದಾಗಿದೆ ಎಂಬುದನ್ನು ಈ ವಾಕ್ಯಭಾಗಗಳು ಸ್ಪಷ್ಟಪಡಿಸುವುದು ಸ್ಪಷ್ಟವಾಗಿರುತ್ತದೆ.

"ದೇವಜನ" ಎಂಬ ಪದವನ್ನು "ಪರಿಶುದ್ಧನು" ಎಂದು, ಹಾಗೂ ಅದರಿಂದ ಬರುವ "ಶುದ್ಧೀಕರಿಸು," "ಶುದ್ಧೀಕರಿಸಲ್ಪಟ್ಟವನು," "ಶುದ್ಧೀಕರಣ" ಎಂದು ಭಾಷಾಂತರಿಸಲ್ಪಡ ಬಹುದು. ಅದರ ಅರ್ಥ "ದೇವಜನವಾಗಿ ಮಾಡಲ್ಪಟ್ಟವನು" ಇಲ್ಲವೇ "ಪರಿಶುದ್ಧನಾಗಿ ಮಾಡಲ್ಪಡುವವನು" ಎಂದಾಗುತ್ತದೆ. "ಕರ್ತನಿಗೆ ಪ್ರಿಯರಾಗಿರುವ ಸಹೋದರರೇ, ನೀವು ಪರಿಶುದ್ಧಾತ್ಮನಿಂದ ಶುದ್ಧೀಕರಿಸಲ್ಪಟ್ಟವರಾಗಿ ಸತ್ಯದ ಮೇಲೆ ನಂಬಿಕೆಯನ್ನಿಟ್ಟು ರಕ್ಷಣೆಯನ್ನು ಪಡೆಯುವುದಕ್ಕಾಗಿ ದೇವರು ನಿಮ್ಮನ್ನು ಆದಿಯಿಂದ ಆರಿಸಿಕೊಂಡಿದರಿಂದ ನಾವು ನಿಮ್ಮ ವಿಷಯದಲ್ಲಿ ಯಾವಾಗಲೂ ದೇವರಿಗೆ ಕೃತಜ್ಞತಾಸ್ತುತಿ ಮಾಡುವದಕ್ಕೆ ಬದ್ಧರಾಗಿದ್ದೇವೆ, ನೀವು ಹೀಗೆ ರಕ್ಷಿಸಲ್ಪಟ್ಟು ನಮ್ಮ ಕರ್ತನಾದ ಯೇಸುಕ್ರಿಸ್ತನ ಪ್ರಭಾವವನ್ನು ಸಂಪಾದಿಸಿಕೊಳ್ಳಬೇಕೆಂದು ದೇವರು ನಮ್ಮ ಸುವಾರ್ತೆಯ ಮೂಲಕ ನಿಮ್ಮನ್ನು ಕರೆದನು" (2 ಥೆಸಲೊನೀಕ 2:13, 14) ಎಂದು ಪೌಲನು ಬರೆದನು. ವಿಶ್ವಾಸಿಯು ಸುವಾರ್ತೆಗೆ ವಿಧೇಯನಾಗಿ ಕ್ರಿಸ್ತನೊಳಗೆ ಬರುವಾಗ ಸತ್ಯದ ಮುಖಾಂತರ ಆತ್ಮನಿಂದ ಶುದ್ಧೀಕರಿಸಲ್ಪಡುತ್ತಾನೆ (ಯೋಹಾನ 17:17; 1 ಪೇತ್ರ 1:1, 2).

1 ಕೊರಿಂಥ 14:34ರಲ್ಲಿ "ದೇವಜನರ ಸಭೆಗಳು" ಎಂಬ ಮಾತು ಸಾಂಧರ್ಭಿಕ ವಾಗಿ ಇಡಲ್ಪಟ್ಟದ್ದು "ದೇವಜನರು" ಎಂಬ ಪದವನ್ನು ಪರಿಶುದ್ಧಾತ್ಮನು ಹೇಗೆ ಉಪಯೋ ಗಿಸಿದ್ದಾನೆ ಎಂಬುದನ್ನು ವಿವರಿಸುತ್ತದೆ. ಈ ಮಾತು, ಸಭೆಯ ಆರಾಧನೆಯ

ಸಭಾಕೂಟದಲ್ಲಿ ಪರಿಶುದ್ಧಾತ್ಮನ ವರಗಳನ್ನು ಉಪಯೋಗಿಸುವುದರ ಮೇಲೆ ಕೊರಿಂಥ ಸಭೆಗೆ ಕೊಟ್ಟ ವಿವರವಾದ ಬೋಧನೆಯ ಅಂತ್ಯದಲ್ಲಿ ಕಂಡುಬರುತ್ತದೆ. ನಮ್ಮ ಬೈಬಲುಗಳ ಅಧ್ಯಾಯಗಳಲ್ಲಿ ವಿಭಾಗಿಸಿರುವುದಕ್ಕನುಗುಣವಾಗಿ ಅದ್ಭುತಕರವಾದ ವರಗಳ ಅವನ ಚರ್ಚೆಯು ಅಧ್ಯಾಯ 12ರಲ್ಲಿ ಪ್ರಾರಂಭವಾಗುತ್ತದೆ ಮತ್ತು ಅಧ್ಯಾಯ 14ರ ಅಂತ್ಯದಲ್ಲಿ ಮುಕ್ತಾಯಗೊಳ್ಳುತ್ತದೆ. ಇದು 1 ಕೊರಿಂಥದಲ್ಲಿ ಅತೀ ಉದ್ದವಾದ ವಿಷಯದ ವಿವರಣೆಗಳಲ್ಲಿ ಒಂದಾಗಿರುತ್ತದೆ. ಈ ಬೋಧನೆಗಳು ವಿಶೇಷವಾಗಿ ಮೊದಲನೆಯ ಶತಮಾನದ ಸಭೆಗೆ ಕ್ರಮಪ್ರಕಾರವಾದ, ಸಮಾಧಾನದ ಆರಾಧಿಸುವ ಆರಾಧನೆ ಗಳು ಇರುವುದಕ್ಕಾಗಿ ಕೊಡಲ್ಪಟ್ಟಿವೆ.[1] ಅವರ ಸಭಾಕೂಟಗಳು ಕ್ರಮವಿಲ್ಲದವುಗಳೂ ಗಲಿಬಿಲಿಯಿಂದ ತುಂಬಿದವುಗಳೂ[2] ಆಗಿದ್ದುದರಿಂದ ಪೌಲನು ಯೋಗ್ಯವಾದ, ಆತ್ಮಿಕ ನಡತೆಯನ್ನು ಕುರಿತು ಬುದ್ಧಿವಾದದೊಂದಿಗೆ ಅದನ್ನು ಸರಿಪಡಿಸಲು ಹುಡುಕಿದನು. ಅವನ ಮನವಿಯು ಅದರ ಮೇಲೆ ಒತ್ತಡ ತಂದಿತು. ಪೌಲನು, "ತನ್ನ ಎಲ್ಲಾ ಸಭೆಗಳಲ್ಲಿ ದೇವರ ಪ್ರಭಾವವು ಸಮಾಧಾನದ್ದಾಗಿರುವುದು, ಗಲಿಬಿಲಿಯದಲ್ಲ" ಎಂಬ ಅರ್ಥದಲ್ಲಿ ಹೇಳಿದನು. ಅವನ ಬುದ್ಧಿವಾದವು ಎಲ್ಲಾ ದೇವರ ಸಭೆಗಳಿಗೆ "ಎಲ್ಲಾ ದೇವಜನರ ಸಭೆಗಳಂತೆ" ಇಲ್ಲವೇ "ದೇವರ ಪ್ರತ್ಯೇಕಿಸಲ್ಪಟ್ಟ ಜನಾಂಗದಂತೆ" ಉಲ್ಲೇಖಿಸಲ್ಪಟ್ಟಿದೆ.

1 ಮತ್ತು 2 ಕೊರಿಂಥದವರಿಗೆ (1 ಕೊರಿಂಥ 1:2; 2 ಕೊರಿಂಥ 1:1), ಫಿಲೆಮೋನ (ವಚನ 5), ಎಫೆಸದವರಿಗೆ (1:1), ಫಿಲಿಪ್ಪಿಯವರಿಗೆ (1:1), ಮತ್ತು ಕೊಲೊಸ್ಸೆಯರಿಗೆ (1:2) ವಂದನೆಗಳಲ್ಲಿ "ದೇವಜನರು" ಎಂಬುದು "ಸಭೆ" ಯೊಂದಿಗೆ ಅದಲು ಬದಲಾಗಿಸಲ್ಪಟ್ಟಿದೆ. ಪೌಲನು ಅವರಿಗೆ ಬರೆದ ಪತ್ರಗಳಲ್ಲಿ ಸೂಚಿಸಿದಂತೆ, ಕೊರಿಂಥದಲ್ಲಿಯ ಕ್ರೈಸ್ತರು ವಿವಿಧ ಸಮಸ್ಯೆಗಳಿಂದ ಮತ್ತು ಅತಿಕ್ರಮಣಗಳಿಂದ ಪೀಡೆಗೆ ಒಳಗಾಗಿದ್ದರು: ಹೀಗಿದ್ದರೂ, ಪೌಲನು ಅವರನ್ನು ದೇವಜನರು ಎಂದು ಸಂಬೋಧಿಸಿದ್ದಾನೆ. ಅವನ ಪ್ರಾರಂಭದ ಮಾತುಗಳು ಅವರಿಗೆ ಬರೆದಂಥವುಗಳು ಕ್ರಿಸ್ತನಲ್ಲಿ ಅವರ ಸ್ಥಾನವನ್ನು ಪ್ರತಿಬಿಂಬಿಸು ತ್ತವೆ: "ಕೊರಿಂಥದಲ್ಲಿನ ದೇವರ ಸಭೆಗೆ ಅಂದರೆ ಕ್ರಿಸ್ತೇಸುವಿನಲ್ಲಿ ಪ್ರತಿಷ್ಠಿತರೂ ದೇವಜನರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರಿಗೆ ಮತ್ತು ನಮಗೂ ಸಮಸ್ತ ದೇವಜನರಿಗೂ ಕರ್ತನಾಗಿರುವ ಯೇಸುಕ್ರಿಸ್ತನ ನಾಮಸ್ಮರಣೆಯನ್ನು ಮಾಡುವವರು ಎಲ್ಲಿದ್ದರೂ ಅವರೆಲ್ಲರಿಗೆ ..." (1 ಕೊರಿಂಥ 1:2) ಕ್ರಿಸ್ತನಲ್ಲಿ ಇರುವ ಯಾವನಾದರೂ ಒಬ್ಬ ದೇವಭಕ್ತನಾಗಿದ್ದಾನೆ ಮತ್ತು ಕ್ರಿಸ್ತನ ಯಾವುದೇ ಸಭೆಯು ದೇವಭಕ್ತರ ಸಮೂಹಕ್ಕಿಂತ ಹೆಚ್ಚಿನದಾಗಿರುವುದಿಲ್ಲ ಎಂದಾಗುತ್ತದೆ.

## ಪದವು ಉದಾಹರಿಸಲ್ಪಟ್ಟಿತು

"ದೇವಜನ" ಎಂಬ ಪದದಲ್ಲಿ ಒಳಗೊಂಡಿರುವ ವಿಚಾರವು "ಜೀವಿಸುವ" ಒಪ್ಪಂದವೆಂದು ಕರೆಯಲ್ಪಟ್ಟ ಜನರ ಮೇಲೆ ಇರುತ್ತದೆ. ಹಳೇ ಒಡಂಬಡಿಕೆಯ ಚರಿತ್ರೆಯ ಎರಡು ಚಿತ್ರಗಳು ಈ ಪದವು ನಮ್ಮನ್ನು ಹೇಗೆ ಬದ್ಧರನ್ನಾಗಿ ಮಾಡುತ್ತದೆ ಎಂಬುದನ್ನು ತೋರಿಸುತ್ತದೆ.

*ದೇವರು ಮತ್ತು ಇಸ್ರಾಯೇಲ್ ಜನಾಂಗ*

ಪದದ ಹಿಂದೆ ಇಸ್ರಾಯೇಲ ಜನಾಂಗದೊಂದಿಗೆ ದೇವರ ಸಂಬಂಧದಲ್ಲಿ ವಿಶೇಷ ವಾಗಿ ದೃಶ್ಯವಾಗಿರುವ ತತ್ವವಿರುವುದು, ಹಳೇ ಒಡಂಬಡಿಕೆಯ ಕೇಂದ್ರ ವಿಷಯವು ತನ್ನ ವಿಮೋಚನಾ ಉದ್ದೇಶಗಳನ್ನು ತನ್ನ ಜನಾಂಗದ ಮೂಲಕವಾಗಿ ಸಾಧಿಸಲಿಕ್ಕಾಗುವಂತೆ ತನ್ನ ಸ್ವಂತ ಜನಾಂಗವಾಗಿ ದೇವರು ಒಂದು ಜನಾಂಗವನ್ನು ಆಯ್ದು ಕೊಳ್ಳುವುದಾಗಿದೆ.

ಆತನು ಅಬ್ರಹಾಮನನ್ನು ಆಯ್ದುಕೊಂಡನು ಮತ್ತು ಅವನನ್ನು ತಾನು ಸಮೂಹಗಳ ತಂದೆಯನ್ನಾಗಿ ಮಾಡುವೆನೆಂದು ವಾಗ್ದಾನ ಮಾಡಿದನು (ಆದಿಕಾಂಡ 15:5). ಆ ವಾಗ್ದಾನದ ನೆರವೇರುವಿಕೆಯು ಇಸಾಕನಲ್ಲಿ ಮತ್ತು ಅವನ ಮಗ ಯಾಕೋಬನಲ್ಲಿ ಪ್ರಾರಂಭವಾಗುತ್ತದೆ. ಯಾಕೋಬ ಮತ್ತು ಅವನ ಕುಟುಂಬವು ಒಂದು ಒಳ್ಳೇ ಗಾತ್ರದ ಗೋತ್ರವಾಗುವಾಗ, ಎಪ್ಪತ್ತೈದು ಜನರು[3] ಆಗುವಾಗ, ಅವರು ಐಗುಪ್ತಕ್ಕೆ ವಲಸೆ ಹೋದರು. ಅಲ್ಲಿ ಕ್ರಮೇಣವಾಗಿ ಕ್ರೂರಿಯಾದ ಫರೋಹನ ದಾಸರಾದರು. ದಾಸತ್ವದ ಹಲವಾರು ನೂರು ವರ್ಷಗಳು ಕಳೆದು ಹೋದನಂತರ ವಿಮೋಚನಕಾಂಡ ಪುಸ್ತಕದ ಪ್ರಾರಂಭದ ಅಧ್ಯಾಯಗಳಲ್ಲಿ ದಾಖಲಿಸಲ್ಪಟ್ಟಂತೆ ಎಪ್ಪತ್ತೈದು ಜನ ಮೂಲ ಇಸ್ರಾಯೇಲ್ಯರು ಒಂದು ಜನಾಂಗವಾಗಿ ಬೆಳೆದಿದ್ದರು; ಅವರ ಸಂಖ್ಯೇ 2.5 ಮಿಲಿಯನ್ ಆಗಿತ್ತು. ಇಲ್ಲವೇ ಗಾತ್ರದಲ್ಲಿ ಹೆಚ್ಚಿನದಾಗಿತ್ತು ಎಂದು ಲೆಕ್ಕಿಸಲಾಗಿದೆ. ಅಬ್ರಹಾಮನ ಸಂತತಿಯವರು ಸಂಖ್ಯೆಯಲ್ಲಿ ಅಷ್ಟು ದೊಡ್ಡದಾಗಿ ಬೆಳೆಯುವಷ್ಟು ದೇವರಿಂದ ಆಶೀರ್ವದಿಸಲ್ಪಟ್ಟರು; ದಾಸತ್ವದ ವರ್ಷಗಳಲ್ಲಿ ಅವರು ಹಾಗೆ ಬೆಳೆದದ್ದು ಪಂಡಿತರು ಆಶ್ಚರ್ಯಪಡುವಂಥದ್ದಾಗಿದೆ. ದೇವರು, ಮೋಶೆಯ ಮುಖಾಂತರ, ಅವರನ್ನು ಬಾಧೆಯ ಬೆಂಕಿಯೊಳಗಿಂದ ಅವರನ್ನು ಹೊರಗೆ ದೇವರ ಬೆಟ್ಟವಾದ ಸೀನಾಯಿ ಬಳಿಗೆ ಕರತಂದನು. ಅಲ್ಲಿ ಅವರಿಗೆ ಹೀಗೆ ಹೇಳಿದನು, "ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗುವಿರಿ; ಸಮಸ್ತ ಭೂಮಿಯೂ ನನ್ನ ದಷ್ಟೆ. ನೀವು ನನಗೆ ಯಾಜಕ ರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ" (ವಿಮೋಚನಕಾಂಡ 19:5, 6).

ಇಸ್ರಾಯೇಲು ನಿಶ್ಚಯವಾಗಿ ಯಾವಾಗಲೂ ದೇವರ ಪರಿಶುದ್ಧ ಜನಾಂಗದಂತೆ ಜೀವಿಸಲಿಲ್ಲ; ಹೀಗಿದ್ದರೂ, ಅವರು ದೇವರ "ಪ್ರತ್ಯೇಕಿಸಿಡಲ್ಪಟ್ಟ" ಜನಾಂಗ ಎಂಬ *ಸ್ಥಾನದಲ್ಲಿದ್ದರು. ರೂಢಿಯಲ್ಲಿ* ಆತನ ಪ್ರಜೆಯಾಗಿರುವಲ್ಲಿ, ಅವರು ಸೋತು ಹೋದಾಗ ಅವರ ಪಾಪವನ್ನೂ ದಂಗೆಯನ್ನೂ ದೇವರು ಕ್ಷಮಿಸಲಿಲ್ಲ. ಆತನು ಎಂದೂ ಕ್ಷಮಿಸುವುದಿಲ್ಲ. ಆತನು ತನ್ನ ಮಕ್ಕಳಲ್ಲಿಯಾಗಲೀ ಇಲ್ಲವೇ ಬೇರೆಯಾರಲ್ಲಿ ಆಗಲೀ, ಪಾಪವನ್ನು ಕಡೆಗಣಿಸುವದಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ಅವನಾಗಲೀ, ಆಕೆಯಾಗಲೀ ದೇವರ ಒಡಂಬಡಿಕೆಯಲ್ಲಿ ಇರಲಿ ಇಲ್ಲವೇ ಹೊರಗೆ ಇರಲಿ, ತನ್ನ ಜೀವಿತಕ್ಕಾಗಿ ದೇವರ ಮುಂದೆ ಉತ್ತರ ಕೊಡಬೇಕು (2 ಕೊರಿಂಥ 5:10). ಹೀಗಿದ್ದರೂ, ಭೂಲೋಕದ ಎಲ್ಲಾ ಜನಾಂಗಗಳಲ್ಲಿ ಇಸ್ರಾಯೇಲು ದೇವರ ಜನಾಂಗವಾಗಿರಲು ದೈವಿಕವಾಗಿ ಕರೆಯಲ್ಪಟ್ಟಿತ್ತು. ಒಂದು ಅರ್ಥದಲ್ಲಿ, ಅವರು ದೇವರ ಜನರಾಗಿದ್ದರು, ಒಂದು ಪರಿಶುದ್ಧ ಜನಾಂಗವಾಗಿದ್ದರು.

*ದೇವರು ಮತ್ತು ಲೇವಿಯರ ಯಾಜಕತ್ವ*

"ದೇವರಜನರು" ಇಲ್ಲವೇ "ಪರಿಶುದ್ಧರು" ಎಂಬುದರಿಂದ ಹೇಳಲ್ಪಟ್ಟ ವಿಚಾರವನ್ನು ಮೋಶೆಯ ಯಾಜಕತ್ವದ ವಿವರಣೆಯಲ್ಲಿಯೂ ಕಾಣಬಹುದು. ಹಳೇ ಒಡಂಬಡಿಕೆಯ ಯಾಜಕತ್ವದ ಸಂಘಟನೆಯು ಮೂರು ಅವಧಿಗಳಲ್ಲಿ ಬಂದಿತು. ಮೊದಲನೆಯ ಪದವನ್ನು *ವಿಮೋಚನೆಯ* ಹಂತ ಎಂದು ಕರೆಯ ಬಹುದು. ಚೊಚ್ಚಲಾಗಿ ಹುಟ್ಟಿದವರು, ಇಸ್ರಾಯೇಲ್ಯರು ಐಗುಪ್ತದಿಂದ ಹೊರಟು ಹೋಗುವ ರಾತ್ರಿಯಲ್ಲಿ ದೇವರಿಂದ "ದಾಟಿ ಹೋಗಲ್ಪಟ್ಟವರು" ಆತನಿಗೆ ಆತನ ವಿಶೇಷ ಸೇವಕರಾಗಿ ಪ್ರತಿಷ್ಠಿಸಲ್ಪಟ್ಟರು (ವಿಮೋಚನಕಾಂಡ 13:11-15; ಅರಣ್ಯಕಾಂಡ 3:13). ಅವರು ದೇವರಿಗೆ ಪರಿಶುದ್ಧರಾಗಿದ್ದರು.

ಎರಡನೆಯ ಬೆಳವಣಿಗೆಯು *ಸಮಾರ್ಯದ ಹಂತವಾಗಿತ್ತು.* ಲೇವಿ ಗೋತ್ರವು

ಬಂಗಾರದ ಕರುವಿನ ಘಟನೆಯ ಸಮಯದಲ್ಲಿ ಅವರ ನಂಬಿಗಸ್ತ ಭಕ್ತಿತೋರಿಸುವಿಕೆಗೆ ಬಹುಮಾನವಾಗಿ ದೇವರ ಸೇವೆ ಮಾಡಲು ಮತ್ತು ಚೊಚ್ಚಲಾಗಿ ಹುಟ್ಟಿದವರ ಬದಲಾಗಿ ಇರುವುದಕ್ಕಾಗಿ ಆಯ್ಕೆ ಮಾಡಿಕೊಳ್ಳಲ್ಪಟ್ಟಿತು (ವಿಮೋಚನಕಾಂಡ 32:25-29). ಪ್ರಾರಂಭದಲ್ಲಿ ಈ ಗೋತ್ರವು ಐಗಪ್ತದೊಳಗಿಂದ ಹೊರಟು ಬಂದ ಚೊಚ್ಚಲ ಮಕ್ಕಳಿಗಾಗಿ ಪರ್ಯಾಯವಾಗಿದ್ದರು; ಆದರೆ ಮುಂದಿನ ಎಲ್ಲಾ ಚೊಚ್ಚಲಾಗಿ ಹುಟ್ಟಿದ ಗಂಡು ಮಕ್ಕಳು ಅವರ ತಂದೆತಾಯಿಗಳು ಬೆಳ್ಳಿಯ ಐದು ಶೆಕೆಲುಗಳನ್ನು ದೇವಾಲಯದ ಬೊಕ್ಕಸಕ್ಕೆ ಕೊಡುವುದರಿಂದ ಮತ್ತು ಒಂದು ಯೋಗ್ಯವಾದ ಯಜ್ಞ ಅರ್ಪಿಸುವುದರಿಂದ ಬಿಡುಗಡೆ ಗೊಳಿಸಲ್ಪಡಬೇಕಾಗಿತ್ತು.[4]

ಆಮೇಲೆ *ಆಯ್ಕೆಯ ಹಂತ* ಬಂದಿತು, ಲೇವಿ ಗೋತ್ರದ ಆರಾಮನ ಕುಟುಂಬವು ನಿಜವಾದ ಯಾಜಕರ ಮನೆಯವರಂತೆ ದೇವರಿಂದ ಆಯ್ಕೆ ಮಾಡಲ್ಪಟ್ಟಿತ್ತು. ಆರೋನನು ಮೊದಲನೆಯ ಮಹಾ ಯಾಜಕನಾದನು, ಮತ್ತು ಅವನ ಮಕ್ಕಳು ಯಾಜಕರಾದರು. ಆರೋನನ ಗಂಡು ಮಕ್ಕಳು ದೇವದರ್ಶನ ಗುಡಾರದ ಬಳಿಯಲ್ಲಿ ದೇವರ ಪರಿಶುದ್ಧ ಸೇವೆಗಾಗಿ ಪ್ರತ್ಯೇಕಿಸಿ ಇಡಲ್ಪಟ್ಟರು. ಈ ಕುಟುಂಬದಿಂದ ಬರದಿದ್ದ ಯಾವ ಲೇವಿಯನೂ ಯಾಜಕನಾಗಿ ಸೇವೆ ಮಾಡಲಿಕ್ಕಾಗುವುದಿಲ್ಲ. ಇತರ ಲೇವಿಯರು ಮಹಾಯಾಜಕರಿಗೆ ಹಾಗೂ ಯಾಜಕರಿಗೆ ಸಹಾಯಕರಾಗಿ ಕೆಲಸ ಮಾಡಬೇಕಾಗಿತ್ತು.

ಇಸ್ರಾಯೇಲ್ಯರು ಸಿನಾಯಿ ಬಳಿಯಲ್ಲಿ ಬೀಡುಬಿಟ್ಟಾಗ, ನಾದಾಬ್, ಅಬೀಹು, ಎಲೆಯಜಾರ, ಮತ್ತು ಇತಮಾರರು ಅಂದರೆ ಆರೋನನೂ ಅವನ ಗಂಡುಮಕ್ಕಳೂ ಪ್ರಾರಂಭಿಕವಾಗಿ ಯಾಜಕತ್ವವು ಸ್ಥಾಪಿಸಲ್ಪಟ್ಟಾಗ ನೇಮಕ ಮಾಡಲ್ಪಟ್ಟರು (ವಿಮೋಚನ ಕಾಂಡ 28:1). ಅವರು ಅವರ ಬಲಗಿವಿಗಳ ಮೇಲೆ, ಹೆಬ್ಬೆರಳುಗಳ ಮೇಲೆ ಮತ್ತು ಕಾಲಿನ ಹೆಬ್ಬೆರಳುಗಳ ಮೇಲೆ ಮೋಶೆಯಿಂದ ರಕ್ತ ಹಚ್ಚಲ್ಪಡುವುದರಿಂದ ರಕ್ತದಿಂದ ಈ ಹುದ್ದೆಗೆ ಪ್ರತಿಷ್ಠಿಸಲ್ಪಟ್ಟರು. ಇದು ದೇವರ ಸೇವೆಗೆ ಅವರ ಸಮರ್ಪಣೆಯ ಸಂಕೇತವಾಗಿತ್ತು (ಯಾಜಕಕಾಂಡ 8:23, 24). ಆರೋನನೂ ಸಹ "ಪರಿಶುದ್ಧ ಎಣ್ಣೆಯಿಂದ" ಅಭಿಷೇಕಿಸಲ್ಪಟ್ಟನು. ಮಹಾ ಯಾಜಕನಂತೆ ಅವನ ಸ್ಥಾನವನ್ನು ಸಾಂಕೇತಿಸಿತು (ಯಾಜಕಕಾಂಡ 4:3, 5; 8:12).

---

*ಒಬ್ಬ ದೇವಮನುಷ್ಯನು ಪಾಪವಿಲ್ಲದ*
*ಅರ್ಥದಲ್ಲಿ ಪರಿಪೂರ್ಣನಾಗಿರುವುದಿಲ್ಲ,*
*ಆದರೆ ಪರಿಪೂರ್ಣವಾಗಿ ಕ್ಷಮಿಸಲ್ಪಟ್ಟ*
*ಅರ್ಥದಲ್ಲಿ ಅವನು ಪರಿಪೂರ್ಣವಾಗಿದ್ದಾನೆ.*

---

ಈ ಸಾಧನದಿಂದ ಆಯ್ಕೆಯಾದ ಮನುಷ್ಯರು ಹಳೇ ಒಡಂಬಡಿಕೆಯ ಯುಗದಲ್ಲಿ ದೇವರ ಪರಿಶುದ್ಧ ಕೆಲಸಕ್ಕೆ ಪ್ರತ್ಯೇಕಿಸಿಡಲ್ಪಟ್ಟರು. ಅವರು ಯಾಜಕರು ಎಂದು ಕರೆಯಲ್ಪಟ್ಟರು ಮತ್ತು ದೇವರ ಮುಂದೆ ಸೇವೆಯ ಅದ್ವಿತೀಯ ಸ್ಥಾನವು ಅವರಿಗೆ ಕೊಡಲ್ಪಟ್ಟಿತ್ತು (ವಿಮೋಚನಕಾಂಡ 29:44). ಅವರು ಬಾಧ್ಯಸ್ತಿಕೆಯ ಸಂಬಂಧದಲ್ಲಿ ಇದ್ದರು. ಆದರೆ ಅವರು ತಮ್ಮ ಕರೆಯುವಿಕೆಯೊಂದಿಗೆ ದೇವರ ಮುಂದೆ ಸಾಮರಸ್ಯದಲ್ಲಿ ನಡೆಯುವಂತೆ ಜಾಗರೂಕರಾಗಿರ ಬೇಕಾಗಿತ್ತು. ನಾದಾಬ್ ಮತ್ತು ಅಬೀಹು ಅವರು ವಿಚಿತ್ರ ಬೆಂಕಿಯನ್ನು ಅರ್ಪಿಸುವುದರಿಂದ, ಪ್ರತಿಷ್ಠಿತ ಯಾಜಕರಂತೆ ದೇವರ ಮುಂದೆ ನಿಂತರೂ ಅವರು ಕೊಲ್ಲಲ್ಪಟ್ಟರು (ಯಾಜಕಕಾಂಡ 10:1, 2).

ಸಭೆಯು, ಇಸ್ರಾಯೇಲ ಜನಾಂಗದಂತೆ ಮತ್ತು ಹಳೇ ಒಡಂಬಡಿಕೆಯ

ಸಮಯಗಳಲ್ಲಿ ದೈವಿಕವಾಗಿ ಆಯ್ಕೆ ಮಾಡಲ್ಪಟ್ಟ ಯಾಜಕರಂತೆ, ಕ್ರೈಸ್ತ ಯುಗದಲ್ಲಿ ಒಂದುಗೂಡಿಸುತ್ತದೆ (1 ಪೇತ್ರ 2:9), ಸಭೆಯು ಕರ್ತನಿಗೆ ಪರಿಶುದ್ಧತೆಯುಳ್ಳದ್ದಾಗಿರುವುದು. ಆತನು "ಪ್ರತ್ಯೇಕವಾಗಿಟ್ಟ" ಜನಾಂಗವಾಗಿತ್ತು. "ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸುಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವುದಕ್ಕೆ ಪರಿಶುದ್ಧ ಯಾಜಕ ವರ್ಗದವರಾಗಿದ್ದೀರಿ" (1 ಪೇತ್ರ 2:5) ಎಂದು ಪೇತ್ರನು ಸಭೆಯ ಬಗ್ಗೆ ಹೇಳಿದನು. ದೇವರಿಂದ ಆಯ್ಕೆ ಮಾಡಲ್ಪಟ್ಟ ಸಭೆಯು "ಪರಿಶುದ್ಧವಾದವರ" ಇಲ್ಲವೇ ದೇವಜನರ ಸಭೆಯಾಗಿದೆ.

ದೇವಭಕ್ತನ ಬಗ್ಗೆ ದೇವರ ದೃಷ್ಟಿಕೋನಕ್ಕೆ ಇತ್ತೀಚೆಗಿನ ದೃಷ್ಟಾಂತವು ಜೆಫ್ಫರಿ ಡಾಹ್ಮರ್ ಆಗಿರುವನು. ಅವನು ಎಲ್ಲಾ ಕಾಲಗಳಲ್ಲಿ ಅತೀ ಹೆಚ್ಚು ಕೊಲೆ ಮಾಡಿದ ಕುಖ್ಯಾತಿ ಹೊಂದಿದವರಲ್ಲಿ ಒಬ್ಬನಂತೆ ಬಹುಶಃ ಚರಿತ್ರೆಯಲ್ಲಿ ಮುಳುಗಿ ಹೋಗಬಹುದು. ಹದಿನೇಳು ಜನ ಪುರುಷರನ್ನು ಮತ್ತು ಬಾಲಕರನ್ನು ಕೊಂದಿದ್ದಕ್ಕಾಗಿ ಶಿಕ್ಷಿಸಲ್ಪಟ್ಟು ಜೀವಾವಧಿ ಸೆರೆಮನೆ ವಾಸದ ದಂಡನೆ ಹೊಂದಿದ್ದನು. ಆದಾಗ್ಯೂ ನಮಗೆ ತಿಳಿದಂತೆ, ಅವನು ಒಬ್ಬ ದೇವಜನ ಆದನು.

ಇಬ್ಬರು ಜಾಗತಿಕ ಬೈಬಲ್ ಸ್ಕೂಲ್ ಬೋಧಕರು, ಕರ್ಟಿಸ್ ಬೂತ್ ಮತ್ತು ಮೇರಿ ಮೊಟ್ಟ, ಜೆಫ್ಫರಿಯ ಬಗ್ಗೆ ಟೀವಿ ನ್ಯೂಸ್ ಬ್ರೊಡ್ ಕಾಸ್ಟ್‌ಗಳಿಂದ ಮತ್ತು ವೃತ್ತ ಪತ್ರಿಕೆಗಳಿಂದ ತಿಳಿದುಕೊಂಡು, ಅವನಿಗೆ ಜಾಗತಿಕ ಬೈಬಲ್ ಸ್ಕೂಲಿನ ಕರಸ್‌ಪಾಂಡೆನ್ಸ್ ಕೋರ್ಸಿನ ಬೈಬಲ್ ಪಾಠಗಳನ್ನು ಕಳುಹಿಸಿದರು. ಜೆಫ್ಫರಿಯು ಪಾಠಗಳನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿದನು ಮತ್ತು ಅವುಗಳಲ್ಲಿ ಪ್ರತಿಯೊಂದಕ್ಕೆ ತಾನು ಬಾಪ್ತಿಸ್ಮ ಹೊಂದುವ ಅಪೇಕ್ಷೆಯನ್ನು ವ್ಯಕ್ತಪಡಿಸಿ ಪತ್ರ ಬರೆದನು. ಕೆಲವೆ ವಾರಗಳಲ್ಲಿ, ಜೆಫ್ಫರಿಯು ಇಡಲ್ಪಟ್ಟ ಸೆರೆಮನೆಗೆ ಹೋಗಿ, ಜಲಾವರ್ತಗಳಲ್ಲಿ ಒಂದರಲ್ಲಿ ಅವನಿಗೆ ಬಾಪ್ತಿಸ್ಮ ಮಾಡಿಸಲು ರಾಯ್ ರಾಟ್‌ಕ್ಲಿಫ್ ಅವರನ್ನು ಸಿದ್ಧಪಡಿಸಲಾಯಿತು. ಅವರು ಮೇ, 10, 1994ರಂದು ಜೆಫ್ಫರಿಗೆ ಬಾಪ್ತಿಸ್ಮ ಮಾಡಿಸಿದರು. ಬಾಪ್ತಿಸ್ಮ ನಂತರ ರಾಯ್ ಅವರೊಂದಿಗೆ ಪ್ರತೀವಾರ ಜೆಫ್ಫರ ಅಧ್ಯಯನ ಮಾಡಿದನು. ಅವನು ಕ್ರಿಸ್ತನೊಂದಿಗೆ ಬೆಳೆಯುತ್ತಿದ್ದನು ಮತ್ತು ಕ್ರಿಸ್ತನ ಸೇವೆ ಮಾಡಲು ಅವಕಾಶಗಳಿಗಾಗಿ ಅಪೇಕ್ಷೆ ಪಡುತ್ತಿದ್ದನು. ನವಂಬರ್ 28, 1994ರಂದು ಜೆಫ್ಫರಿಯು ಸೆರೆಮನೆಯ ಬಾತ್‌ರೂಮ್‌ಗಳಲ್ಲಿ ಒಂದರಲ್ಲಿ ಸಾಯುವಂತೆ ಹೊಡೆಯಲ್ಪಟ್ಟನು. ಅವನ ಮರಣದ ಸುತ್ತಲಿದ್ದ ಎಲ್ಲಾ ವಿವರಗಳನ್ನು ನಾವು ತಿಳಿದಿರುವುದಿಲ್ಲ, ಆದರೆ ಜೆಫ್ಫರಿಯು ತನ್ನ ಮರಣದವರೆಗೆ ಕ್ರಿಸ್ತನ ಕಡೆಗಿನ ತನ್ನ ಸಮರ್ಪಣೆಯಲ್ಲಿ ಯಥಾರ್ಥನಾಗಿದ್ದನೆಂದು ರಾಯ್ ಅವರು ನಂಬಿದರು.

ಸುವಾರ್ತೆಯು ಎಲ್ಲರಿಗಾಗಿ - ಕೆಟ್ಟವರಿಗಾಗಿ, ಉತ್ತಮರಿಗಾಗಿ, ಮತ್ತು ಮಧ್ಯದಲ್ಲಿಯ ಪ್ರತಿಯೊಬ್ಬರಿಗಾಗಿ ಇರುವುದು. ಕ್ರಿಸ್ತನಿಗಾಗಿ ತನ್ನ ಮಾರ್ಪಡುವಿಕೆಯಲ್ಲಿ ಜೆಫ್ಫರಿ ಡಾಹ್ಮರನು ಒಬ್ಬ ದೇವಭಕ್ತನಾದನು ಮತ್ತು ತನ್ನ ಮರಣದವರೆಗೆ ದೇವ ಭಕ್ತನಾಗಿಯೇ ಉಳಿದನು. ಅವನು ಹೆಚ್ಚಾದವರಿಂದ ಅಮೇರಿಕದ ಚರಿತ್ರೆಯಲ್ಲಿ ಒಬ್ಬ ಅತಿ ದುಷ್ಟ ಪಾತಕಿಗಳಲ್ಲಿ ಒಬ್ಬನೆಂದು ಜ್ಞಾಪಿಸಲ್ಪಟ್ಟರೂ, ದೇವರ ಆಶ್ಚರ್ಯಕರವಾದ ಕೃಪೆಯಿಂದ, ಅವನು ತನ್ನ ಜೀವನದ ಕೊನೆಯ ಆರು ಮಾಸಗಳನ್ನು ಒಬ್ಬ ದೇವ ಭಕ್ತನಂತೆ ಜೀವಿಸಿದನು!

ದೇವರು ನಮ್ಮನ್ನು *ನಮ್ಮ ಪಾಪಗಳಲ್ಲಿ ರಕ್ಷಿಸುವುದಿಲ್ಲ, ಆದರೆ ನಮ್ಮ ಪಾಪಗಳಿಂದ ರಕ್ಷಿಸುತ್ತಾನೆ* - ಯಾಕಂದರೆ ಆತನ ರಕ್ಷಣೆಯನ್ನು ಸ್ವೀಕರಿಸುವುದಕ್ಕೆ ನಂಬಿಕೆಯನ್ನೂ

ವಿಧೇಯತೆಯನ್ನೂ ಕೇಳುತ್ತಾನೆ. ಆತನು ನಮ್ಮ ತಪ್ಪುಗಳನ್ನು ಶುದ್ಧೀಕರಿಸುವುದಿಲ್ಲ, ಆದರೆ ಆತನು ಅವುಗಳಿಂದ ನಮ್ಮನ್ನು ರಕ್ಷಿಸುತ್ತಾನೆ. ಒಬ್ಬನು ಕ್ರಿಸ್ತನ ಬಳಿಗೆ ನಂಬಿಕೆ, ಮಾನಸಾಂತರ, ಯೇಸುವಿನಲ್ಲಿ ಅರಿಕೆ ಮತ್ತು ಕ್ರಿಸ್ತನಲ್ಲಿ ಬಾಪ್ತಿಸ್ಮದ ಮುಖಾಂತರ ಬರುವಾಗ, ಆತನು ಆ ವ್ಯಕ್ತಿಯನ್ನು ಪಾಪದಿಂದ ಶುದ್ಧೀಕರಿಸುವನು ಮತ್ತು ಆ ವ್ಯಕ್ತಿಯನ್ನು ತನ್ನ ಸೇವೆಗಾಗಿ ಪ್ರತ್ಯೇಕಿಸಿ ಇಡುವನು. ಒಬ್ಬ ದೇವಭಕ್ತನು ತಪ್ಪಿಲ್ಲದವನಾಗಿರುವುದಿಲ್ಲ, ಆದರೆ ದೇವರ ಕೃಪೆಯಿಂದ ಅವನು ದೋಷವಿಲ್ಲದವನಾಗಿರುವನು. ಒಬ್ಬ ದೇವಭಕ್ತನು *ಪಾಪ ರಹಿತನಾಗಿರುವ* ಅರ್ಥದಲ್ಲಿ ಪರಿಪೂರ್ಣನಾಗಿರುವುದಿಲ್ಲ, ಆದರೆ ಪರಿಪೂರ್ಣವಾಗಿ ಕ್ಷಮಿಸಲ್ಪಟ್ಟಿರುವ ಅರ್ಥದಲ್ಲಿ *ಪರಿಪೂರ್ಣನಾಗಿರುವನು.*

## ಪದವು ಕಾರ್ಯಗತ ಗೊಳಿಸಲ್ಪಟ್ಟಿತು

"ದೇವಜನರ ಸಭೆಗಳು" ಎಂಬ ಪದಗುಚ್ಛವು ಅಮೂಲ್ಯ ನಾಮಾಂಕಿತವಾಗಿದೆ. ಅದನ್ನು ಸಭೆಯು ಗಂಭೀರವಾಗಿ ತೆಗೆದುಕೊಳ್ಳತಕ್ಕದ್ದು. ದೇವರು ತನ್ನ ಜನರನ್ನು "ದೇವ ಜನರು" ಎಂದು ಕರೆಯುತ್ತಾರೆ. ಈ ನಾಮಾಂಕಿತವು ನಮ್ಮ ಮೇಲೆ ಯಾವ ಪರಿಣಾಮ ಮಾಡಬಹುದು.

ನಾವು ಅದನ್ನು *ಸ್ವೀಕರಿಸತಕ್ಕದ್ದು.* ದೇವರು ಈ ಗುರುತನ್ನು ತನ್ನ ಸಭೆಗೆ ತನ್ನ ಸಭೆಗಾಗಿ ಇರುವ ತನ್ನ ಉದ್ದೇಶವನ್ನು ಜ್ಞಾಪಿಸಿಕೊಳ್ಳುವುದಕ್ಕಾಗಿ ಕೊಟ್ಟನು. ನಾವು ಆತನ ಸ್ವಕೀಯ ಪ್ರಜೆಯೂ ಆತನ ಸ್ವಂತ ಸೊತ್ತೂ ಆಗಿರಬೇಕೆಂಬುದು ಆತನ ಚಿತ್ತವಾಗಿದೆ. ನಮ್ಮನ್ನು ನಾವು ದೇವರ ಆರಾಧನೆಗಾಗಿ ಮತ್ತು ಕೆಲಸಕ್ಕಾಗಿ ಪ್ರತ್ಯೇಕಿಸಲ್ಪಟ್ಟಂತೆ ನೋಡಿಕೊಳ್ಳಬೇಕು.

ನಾವು ಅದನ್ನು *ಮೆಚ್ಚಿಕೊಳ್ಳತಕ್ಕದ್ದು,* ದೇವರ ಆಯ್ದುಕೊಂಡ ಜನಾಂಗವಾಗಿರುವುದರ ಗೌರವವನ್ನು ಯೋಚಿಸೋಣ. ಇದಕ್ಕಿಂತ ಹೆಚ್ಚು ಪ್ರೇರಣಾತ್ಮಕವಾದದ್ದು ಯಾವುದು ಇರುವುದು? ಯಾವ ಮಾತು ನಮಗೆ ಹೆಚ್ಚು ಪ್ರೋತ್ಸಾಹದಾಯಕವಾದದ್ದಾಗಿರುವುದು? ನಾವು ದೇವರ ಕುಟುಂಬದಲ್ಲಿ ದತ್ತು ಸ್ವೀಕರಿಸಲ್ಪಟ್ಟಿದ್ದೇವೆ (ಎಫೆಸ 1:5). ಆತನು ತನ್ನ ಪ್ರೀತಿಯನ್ನು ನಮ್ಮ ಹೃದಯಗಳೊಳಗೆ ಹರಿಸಿದ್ದಾನೆ ಮತ್ತು ನಮ್ಮನ್ನು ತನ್ನ ಸ್ವಾಸ್ಥ್ಯವನ್ನಾಗಿ ಮಾಡಿಕೊಂಡಿದ್ದಾನೆ!

ನಾವು ಅದನ್ನು *ಅನ್ವಯಿಸಲಿಕ್ಕೆ* ಹುಡುಕಬೇಕು. ಒಬ್ಬ ಕ್ರೈಸ್ತನ *ರೂಢಿಯು* ಅವನ *ಸ್ಥಾನದೊಂದಿಗೆ,* ಅವನ *ನಡತೆಯು* ಅವನ *ನಂಬಿಕೆಯೊಂದಿಗೆ* ಸಮಾನವಾದದ್ದಾಗಿರಬೇಕು.

"ದೇವಜನ" ಎಂಬ ಪದವು ನಮ್ಮನ್ನು ಇಡುವ ಮಟ್ಟದಲ್ಲಿ ಜೀವಿಸುವಲ್ಲಿ ನಾವು ಬಹಳ ಸಲ ಸೋತು ಹೋಗುತ್ತೇವೆ. ನಾವು ನಮ್ಮ ಯಜಮಾನನ ಶಿಷ್ಯರು ಇಲ್ಲವೇ ವಿದ್ಯಾರ್ಥಿಗಳು ಆಗಿರುತ್ತೇವೆ (ಅಪೊಸ್ತಲರ ಕೃತ್ಯಗಳು 11:26), ಆದರೆ ನಾವು ಯಾವಾಗಲೂ ಶಿಷ್ಯರಂತೆ ವರ್ತಿಸುವುದಿಲ್ಲ. ಕ್ರಿಸ್ತನ ಕ್ಲಾಸು ಏರ್ಪಡುವಾಗ ಕೆಲವು ಸಲ ನಾವು ಆಲಸಿಗಳೂ, ಆತನು ಬೋಧಿಸುವಂತೆ ಅದನ್ನು ಕೇಳುವುದರಲ್ಲಿ ಮಂದರೂ, ಶಿಸ್ತುಪಾಲನೆಯ ಕೊರತೆಯುಳ್ಳವರೂ ಆಗಿರುತ್ತೇವೆ (ಇಬ್ರಿಯ 5:11). ನಮ್ಮ ಸಮರ್ಪಣೆಗೆ ತಕ್ಕಂತೆ ನಮ್ಮ ನಡತೆಯನ್ನೂ, ನಮ್ಮ ಪ್ರೀತಿಗೆ ಸರಿಯಾಗಿ ನಮ್ಮ ಜೀವಿತಗಳನ್ನೂ ತರುವುದರಲ್ಲಿ ನಾವು ಹೆಚ್ಚು ಶ್ರದ್ಧೆಯುಳ್ಳವರು ಆಗಿರಬೇಕು.[5]

ಪ್ರತಿಯೊಬ್ಬ ಕ್ರೈಸ್ತನೂ ದೇವಜನವಾಗಿರುವನು, ಮತ್ತು ಅವನು ಕರೆಯಲ್ಪಟ್ಟ ಕರೆಯುವಿಕೆಗೆ ತಕ್ಕಂತೆ ಜೀವಿಸುವುದನ್ನು ಹುಡುಕತಕ್ಕದ್ದು (ಎಫೆಸ 4:1). ಒಂದು ಗ್ರಾಮದ ಮನುಷ್ಯನು ವಿವರಿಸಿದಂತೆ "ಮೊದಲು ನೀನು ಅದನ್ನು ನಂಬಬೇಕು. ಆ ಮೇಲೆ ನೀನು

ಅದರಂತೆ ನಡೆದುಕೊಳ್ಳಬೇಕು.''

ದೇವರು ನಮಗೆ ಕೊಟ್ಟ ವಿವರಣೆಯಿಂದ ನಾವು ಆತನ ''ನಿಜವಾದ ಜನಾಂಗ'' - ''ಪರಿಶುದ್ಧರು'' ಇಲ್ಲವೇ ''ದೇವಜನರು'' ಆಗಿರಲು ನಮ್ಮನ್ನು ಆಹ್ವಾನಿಸುತ್ತಾನೆ. ನಮಗಾಗಿ ತನ್ನ ಪರಿಶುದ್ಧ ಉದ್ದೇಶವನ್ನು ನಮ್ಮಲ್ಲಿ ತುಂಬಲು ನಮ್ಮಲ್ಲಿ ಪ್ರತಿಯೊಬ್ಬರಿಗೆ ''ಪಾಪಿ'' ಎಂಬ ಹೆಸರನ್ನು ''ದೇವಜನ'' (''ಪರಿಶುದ್ಧನು'') ಎಂದು ಬದಲಾಯಿಸಿದ್ದಾನೆ.

## ಮುಕ್ತಾಯ

ದೇವರು ತನ್ನ ಸಭೆಯನ್ನು ಹೇಗೆ ನೋಡುವನು? ಪೌಲನ ಪ್ರಕಾರವಾಗಿ, ಆತನು ನಮ್ಮನ್ನು ವರ್ತಮಾನ ಕಾಲದಂತೆ ಈಗಲೇ ದೇವಜನರು ಎಂದು ನೋಡುತ್ತಾನೆ. ''ಒಂದು ದಿನ ಭವಿಷ್ಯದಲ್ಲಿ ನನ್ನ ಮಕ್ಕಳಲ್ಲಿ ಒಬ್ಬರಾಗಲಿ ಇಲ್ಲವೇ ಇಬ್ಬರಾಗಲಿ ದೇವಭಕ್ತರಂತೆ (ಸೇಂಟಹುಡ್) ಮಾಡಲ್ಪಡಬಹುದು'' ಎಂದು ಆತನು ಹೇಳುವುದಿಲ್ಲ. ಇಲ್ಲ. ''ನನ್ನ ಸಭೆಯಂತೆ ನೀವೆಲ್ಲರೂ ನನ್ನ ದೇವಜನರಾಗಿರುವಿರಿ'' ಎಂದು ಹೇಳುತ್ತಾನೆ.

ಒಂದು ದಂತ ಕಥೆಯ ಪ್ರಕಾರವಾಗಿ, ಒಂದು ದಿನ ಮಾರ್ಬಲ್ಲಿನ ಒಂದು ಬಂಡೆಯು, ಮೈಕಲ್ ಎಂಜೆಲೋನು ತಾನೇ ಮೇಲ್ವಿಚಾರಣೆ ಮಾಡುತ್ತಿದ್ದ ಮೈಕಲ್ ಎಂಜೆಲೋನ ಕಾರ್ಯಾಗಾರಕ್ಕೆ ಒಯ್ಯಲ್ಪಡಲಿತ್ತು. ಕೆಲಸದವರು ನಿರ್ಲಕ್ಷ್ಯದಿಂದ ಜಾಗರೂಕತೆಯಿಲ್ಲದೇ ಭಾರವಾದ ವಸ್ತುವನ್ನು ತರುತ್ತಿದ್ದಾಗ, ಮೈಕಲ್ ಎಂಜೆಲೋನು, ''ಆ ಬಂಡೇಯ ಬಗ್ಗೆ ಜಾಗರೂಕತೆಯಿಂದ ಇರ್ರಿ! ಅದರಲ್ಲಿ ಒಬ್ಬ ದೇವದೂತನಿದ್ದಾನೆ'' ಎಂದು ಅವರ ಕಡೆಗೆ ಕೂಗಿದನು. ಆಯಾಸಗೊಳಿಸುವ ದೈಹಿಕ ಶ್ರಮೆಯ ಬಾಧೆಕೊಡುವ ದಿನವನ್ನು ಮುಗಿಸುವ ಯೋಜನೆಯಲ್ಲಿದ್ದ ಆ ಕೆಲಸದವರು ಅವನ ಗದರಿಕೆ ಗಮನಕೊಡಲಿಲ್ಲ. ಬಿಟ್ಟೀಹಿಡಿಯಲ್ಪಟ್ಟ ಕೈಗಳು ಮಹಾ ಶಿಲ್ಪಿಯನ್ನೂ ಮಾರ್ಬಲನ್ನೂ ಮೌನವಾಗಿದ್ದ ಕಾರ್ಯಗಾರದಲ್ಲಿ ಬಿಟ್ಟುಹೊರಟು ಹೋದವು, ವರ್ಷಗಳಿಂದ ತನಗೆ ಮೆಚ್ಚಿಕೆಯನ್ನು ತಂದುಕೊಟ್ಟ ನಿಪುಣತೆ ಮತ್ತು ಕಲೆಯೊಂದಿಗೆ, ಮೈಕಲ್ ಎಂಜೆಲೋನ ದೊಡ್ಡ ಬಂಡೆಯನ್ನು ಕೆತ್ತುವುದಕ್ಕೆ ಪ್ರಾರಂಭಿಸಿದನು. ಅಳೆಯುವ ಮತ್ತು ಕೆತ್ತುವ, ರೂಪಕೊಡುವ ಹಾಗೂ ನುಣುಪು ಮಾಡುವ ದಿನಗಳ ನಂತರ, ರೇಷಿಮೆ ಹುಳದ ಗೂಡಿನಿಂದ ಪಾತರಗಿತ್ತಿಯಂತೆ ಒಬ್ಬ ದೇವ ದೂತನು ಹೊರಬಂದನು, ಅದು ಸಜೀವ ವಾದಂತೆ, ಯಾವುದೇ ಸಮಯದಲ್ಲಿ ಮಾತಾಡುವಂತೆ ಇಲ್ಲವೇ ಹಾರಿಹೋಗುವಂತೆ ಕಾಣುತ್ತಿತ್ತು. ಮೈಕಲ್ ಎಂಜೆಲೋನು ತನ್ನ ದಾರ್ಶನಿಕ ಕಣ್ಣಿನಿಂದ ನೋಡಿದ ರೀತಿಯಲ್ಲಿ ಆ ಮಾರ್ಬಲಿಗೆ ರೂಪಕೊಟ್ಟನು. ಆ ಕಲ್ಲು ಬಂಡೆಯನ್ನು ಅವನು ದೇವದೂತ ಎಂದು ಕರೆದನು ಮತ್ತು ಅದರೊಳಗಿಂದ ಒಬ್ಬ ದೇವದೂತನನ್ನು ಮಾಡಿದನು.

ಪ್ರತಿಯೊಬ್ಬ ಕ್ರೈಸ್ತನು ಒಬ್ಬ ಪಾಪಿಯಂತೆ ದೇವರ ಬಳಿಗೆ ಬಂದನು. ನಾವು ಮಾನವ ಕಲ್ಲುಗಳಾಗಿದ್ದೆವು, ತರಬೇತಿಯಿಲ್ಲದ ಆತ್ಮಿಕ ಕಣ್ಣಿಗೆ ಸಹಾಯ ಹೀನರು, ನಿರೀಕ್ಷೆಯಿಲ್ಲದವರು, ಉದ್ದೇಶವಿಲ್ಲದವರು ಮತ್ತು ನಿರುಪಯೋಗಿಗಳು ಆಗಿದ್ದೆವು. ನಿಜವಾದ ನುರಿತ ಶಿಲ್ಪಿಯು ನಮ್ಮನ್ನು ತೆಗೆದುಕೊಂಡನು ಮತ್ತು ತನ್ನ ವೈಯಕ್ತಿಕ ಯೋಜನೆಯನ್ನಾಗಿ ಮಾಡಿದನು. ನಾವು ಯಾವುದಕ್ಕಾಗಿದ್ದೇವೋ ಅದಕ್ಕಾಗಿ ಅಲ್ಲ, ಇಲ್ಲವೇ ನಾವೇನಾಗಿದ್ದೇವೋ ಅದಕ್ಕಾಗಿ ಅಲ್ಲ, *ಆದರೆ ನಾವು ಏನಾಗಿರಬಹುದು ಅದನ್ನು ಆತನು ನೋಡಿದನು, ಆತನು ನಮ್ಮಲ್ಲಿ ಪ್ರತಿಯೊಬ್ಬರಲ್ಲಿ ಒಬ್ಬ ''ಪರಿಶುದ್ಧನನ್ನು'' ನೋಡಿದನು.*

ಆತನಿಗೆ ನಮ್ಮ ಮಾರ್ಪಡವಿಕೆಯ ಸಮಯದಲ್ಲಿ, ಕ್ರಿಸ್ತನ ರಕ್ತದ ಮುಖಾಂತರ ಆತನು ನಮ್ಮ ಪಾಪಗಳನ್ನು ಶುದ್ಧೀಕರಿಸಿದನು ಮತ್ತು ನಮ್ಮನ್ನು ದೇವಜನರೆಂದು ಕರೆಯಲು ಪ್ರಾರಂಭಿಸಿದನು. ದೇವಜನರು ಈ ಜೀವನದಲ್ಲಿ, ಪೂರ್ತಿಗೊಳಿಸಿದ

ಉತ್ಪಾದನೆಯಂತೆ ಕಂಡುಬರುವುದಿಲ್ಲ; ಆದರೆ ಪ್ರತೀ ದಿನ ದೇವರು ನಮ್ಮನ್ನು ಕೆತ್ತುವಂತೆ, ನಾವು ಏನಾಗಿರಬೇಕೆಂದು ಆತನು ಬಯಸುತ್ತಾನೋ ಅದಕ್ಕೆ ಸಮೀಪವಾಗಿ ನಮ್ಮನ್ನು ತರುತ್ತಾನೆ. ನಿರ್ಣಾಯಕ ಸತ್ಯವು ಇದಾಗಿದೆ: ನಾವು ಆತನ ಚಿತ್ತಕ್ಕೆ ಒಪ್ಪಿಸಿಕೊಟ್ಟಿದ್ದೇವೆ. ಮತ್ತು ದಿನವೂ ದೈವಿಕ ಉಳಿಗೆ ನಮ್ಮನ್ನು ಒಪ್ಪಿಸಿಕೊಟ್ಟಿದ್ದೇವೆ. ಈಗ ನಾವು ದೇವ ಜನ ರಾಗಿದ್ದೇವೆ, ಮತ್ತು ನಾವು ಆತನ ಸನ್ನಿಧಿಯಲ್ಲಿ ಜೀವಿಸುವಂತೆ ಹಾಗೂ ಆತನ ಸ್ವರೂಪಕ್ಕೆ ಹೆಚ್ಚು ಪೂರ್ಣವಾಗಿ ಹೊಂದಿಕೊಳ್ಳುವ ಪ್ರಗತಿಯಲ್ಲಿ ಮುಂದುವರಿಯುವಂತೆ ನಾವು ಸಂಪೂರ್ಣವಾಗಿ ಆತನ ಸೇವೆಗೆ ಪ್ರತ್ಯೇಕಿಸಿ ಇಡಲ್ಪಡುವೆವು.

ದೇವಜನ ಎಂಬ ಪದಕ್ಕೆ ಅಂತ್ಯವು ಎರಡು ಭಾಗದ ಪ್ರಶ್ನೆಯಿದೆ: ಮೊದಲನೆಯದು, ನಾನು ದೇವಜನ ಆಗಿದ್ದೇನೋ? ಎರಡನೆಯದು, ನಾನು ದೇವಜನ ಆಗಿದ್ದರೆ, ನನ್ನ ಹೆಸರಿಗೆ ತಕ್ಕಂತೆ ನಾನು ಜೀವಿಸುತ್ತಿರುವೆನೋ?

---

ಟಿಪ್ಪಣಿಗಳು

[1]ಈ ಆದಿ ಸಭೆಗಳಿಗೆ ಅವುಗಳಿಗೆ ಮಾರ್ಗದರ್ಶನ ಮಾಡಲು ಹೊಸ ಒಡಂಬಡಿಕೆ ಇರಲಿಲ್ಲ, ಯಾಕಂದರೆ ಅದು ಇನ್ನೂ ಪೂರ್ಣಗೊಳಿಸಲ್ಪಟ್ಟಿರಲಿಲ್ಲ; ಹೀಗೆ ದೇವರು ಪರಿಶುದ್ಧಾತ್ಮನ ಅದ್ಭುತಕರವಾದ ವರಗಳನ್ನು ಅವರಿಗೆ ಒದಗಿಸುವುದರಿಂದ ಅವರ ಅಗತ್ಯತೆಗಳಿಗೆ ಒದಗಿಸಿದನು. ಪರಿಶುದ್ಧ ಬರಹಗಳ ಈ ವಿಭಾಗದಲ್ಲಿ ವರಗಳ ಎರಡು ಯಾದಿಗಳು ಕೊಡಲ್ಪಟ್ಟಿವೆ (1 ಕೊರಿಂಥ 12:8-11; 12:28-30). ಈ ವರಗಳು ಅಪೊಸ್ತಲರ ಹಸ್ತಗಳನ್ನಿಡುವುದರಿಂದ ಅವರಿಗೆ ಕೊಡಲ್ಪಟ್ಟವು (ಅಪೊಸ್ತಲರ ಕೃತ್ಯಗಳು 8:14-17). ಹೊಸ ಒಡಂಬಡಿಕೆಯು ಸಂಪೂರ್ಣಗೊಂಡಾಗ, ಕೊನೆಯ ಅಪೊಸ್ತಲನು ಮರಣ ಹೊಂದಿದ್ದನು, ಮತ್ತು ಅಪೊಸ್ತಲರು ತಮ್ಮ ಕೈಗಳನ್ನಿಟ್ಟು ಕೊನೆಯವನೂ ಮರಣಹೊಂದಿದ್ದನು, ಆಗ ಅದ್ಭುತಕರವಾದ ವರಗಳು ನಿಂತುಹೋದವು. ಇಂದು ಹೊಸ ಒಡಂಬಡಿಕೆಯು ನಮ್ಮ ಮಾರ್ಗದರ್ಶಿಯಾಗಿ ಮತ್ತು ಸ್ಥಿರತೆಯ ನಮ್ಮ ಮೂಲವಾಗಿ ಇರುವುದು. [2]ಅವರಿಗೆ ಆತ್ಮನ ಅದ್ಭುತಕರವಾದ ವರಗಳಿದ್ದವು, ಆದರೆ ಅವರಿಗೆ ಕೊಡಲ್ಪಟ್ಟ ಪ್ರಕಟನೆಗಳನ್ನು ಕ್ರಮ ಪ್ರಕಾರವಾದ ರೀತಿಯಲ್ಲಿ ಹೇಳಬೇಕಾಗಿತ್ತು ಮತ್ತು ಒಂದೇ ಸಮಯದಲ್ಲಿ ಇಬ್ಬರು ಮಾತಾಡಬಾರದಿತ್ತು ಇಲ್ಲವೇ ಇನ್ನೊಬ್ಬನು ಹೇಳುತ್ತಿರುವಾಗ ತನ್ನ ಪ್ರಕಟನೆಯೊಂದಿಗೆ ಮಧ್ಯದಲ್ಲಿ ಪ್ರವೇಶಿಸಬಾರದಾಗಿತ್ತು (1 ಕೊರಿಂಥ 14:27, 29). ಒಂದು ರೀತಿಯಲ್ಲಿ ಸಭಾ ಕೂಟದಲ್ಲಿ ಮಹಿಳೆಯರು ಮಾತಾಡುವುದರಿಂದ ಗಲಿಬಲಿಗೆ ಹೆಚ್ಚಿನದನ್ನು ಕೂಡಿಸುವವರಾಗಿದ್ದರು (1 ಕೊರಿಂಥ 14:34-36). [3]ಐಗುಪ್ತಕ್ಕೆ ಹೋದವರು ಎಪ್ಪತ್ತೈದು ಜನರು ಎಂದು ಸ್ತೆಫನನು ಹೇಳಿದನು (ಅಪೊಸ್ತಲರ ಕೃತ್ಯಗಳು 7:14). ಎಪ್ಪತ್ತು ಜನರು ಹೋದರೆಂದು ಹಳೇ ಒಡಂಬಡಿಕೆ ಹೇಳುತ್ತದೆ (ಆದಿಕಾಂಡ 46:27; ವಿಮೋಚನಕಾಂಡ 1:5). ಸೆಪ್ಟುವಗಿಂತವು, ಹಿಬ್ರೂ ಹಳೇ ಒಡಂಬಡಿಕೆಯ ಗ್ರೀಕ್ ಭಾಷಾಂತರವು ಆದಿಕಾಂಡ 46:27ರಲ್ಲಿ ಎಪ್ಪತ್ತೈದು ಎಂದು ಹೇಳುತ್ತದೆ. ಮನಾಸ್ಸಿಯ ಇಬ್ಬರು ಗಂಡುಮಕ್ಕಳ ಎಫ್ರಾಯೀಮನ ಇಬ್ಬರು ಗಂಡುಮಕ್ಕಳು ಮತ್ತು ಎಫ್ರಾಯೀಮನ ಒಬ್ಬ ಮೊಮ್ಮಗನ ಹೆಸರುಗಳನ್ನು ಕೂಡಿಸುವುದರಿಂದ ಎಪ್ಪತ್ತೈದು ಆಗುತ್ತದೆ. ಸ್ತೆಫನನು ಸೆಪ್ಟುವಗಿಂತದಿಂದ ಉಲ್ಲೇಖಿಸಿರತಕ್ಕದ್ದು. [4]ಸಿನಾಯಿಯನ್ನು ಬಿಡಲು ಇಸ್ರಾಯೇಲ್ಯರು ಸಿದ್ಧಪಡಿಸಿಕೊಳ್ಳುತ್ತಿದ್ದಾಗ ಲೇವಿಯರ ಗಣತಿ ಮಾಡಲಾಯಿತು (ಅರಣ್ಯಕಾಂಡ 3:11-51). ಲೇವಿಯರ ಸಂಖ್ಯೆ 22,000 ಐಗುಪ್ತದಿಂದ ಹೊರಟು ಬಂದ ಚೊಚ್ಚಲಮಕ್ಕಳ ಸಂಖ್ಯೇ 22,273. ಭಿನ್ನತೆಯು 273. 22,000 ಲೇವಿಯರು ಚೊಚ್ಚಲಾಗಿ ಹುಟ್ಟಿದವರ ಬದಲಾಗಿ ಮನುಷ್ಯನಿಗಾಗಿ ಮನುಷ್ಯನು, ದೇವರ ಸೇವೆಗಾಗಿ ತೆಗೆದು ಕೊಳ್ಳಲ್ಪಟ್ಟರು; ಉಳಿದ 273 ಜನರು ಪ್ರತಿಯೊಬ್ಬರಿಗೆ ಐದು ಶೆಕೆಲುಗಳಿಂದ ವಿಮೋಚಿಸಲ್ಪಟ್ಟರು. 1,365 ಶೆಕೆಲುಗಳ ಮೊತ್ತವು ಆರೋನನಿಗೂ ಅವನ ಮಕ್ಕಳಿಗೂ ಕೊಡಲ್ಪಟ್ಟಿತು. [5]ಒಬ್ಬ ದೈವ ಭಕ್ತನು ಕ್ರಿಸ್ತನಿಗೆ ಅಪನಂಬಿಗಸ್ತನಾಗುವಾಗ, ಅವನಿಗೆ ನಿತ್ಯಜೀವದ ವಾಗ್ದಾನವಿರುವದಿಲ್ಲ (1 ಕೊರಿಂಥ 9:27), ಆದರೆ ಅವನು ಇನ್ನೂ ಆ ಕುಟುಂಬದ ತಪ್ಪು ಮಾಡುವ ಸದಸ್ಯನಂತೆ ದೇವರ ಕುಟುಂಬದಲ್ಲಿ ಇನ್ನೂ ಇರುವನು. ಒಬ್ಬನು ಕ್ರಿಸ್ತನಿಂದ ಬಿದ್ದು ಹೋಗಬಹುದು ಮತ್ತು ಅವನು ಎಂದೂ

ತಿಳಿಯದಂಥ ಹೆಚ್ಚು ಕೆಟ್ಟದಾದ ಸ್ಥಿತಿಗೆ ಹಿಂದಿರುಗಬಹುದು ಎಂದು ಪೇತ್ರನು ಸೂಚಿಸಿದ್ದಾನೆ (2 ಪೇತ್ರ 2:20-22).

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಸಮಾಚಾರ ಸಾಗಣೆಯು ನಿಜವಾಗಿಯೂ ಹೇಗೆ ಕಷ್ಟಕರವಾಗಿದೆಯೆಂಬುದಕ್ಕೆ ಒಂದು ದೃಷ್ಟಾಂತ ಕೊಡಿರಿ.
2. ಹೊಸ ಒಡಂಬಡಿಕೆಯಲ್ಲಿ "ದೇವಭಕ್ತ" (ಸೇಂಟ್) ಎಂಬ ಪದವು ಏಕರೂಪವಾಗಿ ಹೇಗೆ ಉಪಯೋಗಿಸಲ್ಪಟ್ಟಿದೆ?
3. ಮೊದಲನೆಯ ಶತಮಾನದಲ್ಲಿ ಅದ್ಭುತ ವರಗಳ ಉಪಯೋಗವನ್ನು ವಿವರಿಸಿರಿ.
4. ಪರಿಶುದ್ಧಾತ್ಮನು ಎಷ್ಟು ಅದ್ಭುತ ವರಗಳನ್ನು ಕೊಟ್ಟನು?
5. *ಸ್ಥಾನದಲ್ಲಿರುವ* ದೇವಭಕ್ತನಾಗಿರುವುದು ಎಂಬುದರ ಅರ್ಥವೇನು?
6. ಒಬ್ಬ ದೇವಭಕ್ತನ ನಡೆತೆಯು ಒಬ್ಬನಲ್ಲಿ ಇಲ್ಲದಿದ್ದರೆ, ಅವನು ಇನ್ನೂ ದೇವಭಕ್ತನಾಗಿರುವನೋ?
7. ಹೊಸ ಒಡಂಬಡಿಕೆಯಲ್ಲಿ "ದೇವಜನರು" ಎಂಬ ಪದವು "ಸಭೆ" ಎಂಬುದರದೊಂದಿಗೆ ಅದಲುಬದಲಾಗಿ ಉಪಯೋಗಿಸಲ್ಪಟ್ಟಿರುವುದೋ? ಹಾಗಿದ್ದರೆ, ಎಲ್ಲಿ?
8. ಹಳೇ ಒಡಂಬಡಿಕೆಯ ಬರಹಗಾರರು ಎಂದಾದರೂ "ಪರಿಶುದ್ಧ" ಎಂಬ ಪದವನ್ನು ಇಸ್ರಾಯೇಲಿಗೆ ಉಪಯೋಗಿಸಿರುವರೋ? ಹಾಗಿದ್ದರೆ, ಹೇಗೆ?
9. ಯಾಜಕತ್ವದ ಸೃಷ್ಟಿಯ ವಿವಿಧ ಹಂತಗಳನ್ನು ಚರ್ಚಿಸಿರಿ.
10. 1 ಪೇತ್ರ 2:9ನ್ನು "ದೇವಜನರ" ತತ್ವಕ್ಕೆ ಸಂಬಂಧಿಸಿರಿ.
11. ಈ ಪದಕ್ಕೆ ನಾವು ಯಾವ ಉತ್ತರ ಕೊಡಬಹುದು?
12. ನಾವು ಹೇಗೆ ನಮ್ಮ ಹೆಸರಿಗೆ ತಕ್ಕಂತೆ ಜೀವಿಸಬೇಕು?

© 2009 Truth for Today